ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 3, July-August 2026, Pp. 74-80
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕೊಡಗಿನ ಹಾಲೇರಿ ಮನೆತನದ ಪರಂಪರೆ ಕುರಿತ ಒಂದು ವಿಮರ್ಶಾತ್ಮಕ ಅಧ್ಯಯನ

**ಡಾ. ಶೋಭಾ ಹೆಚ್. ಎಲ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಡಿ. ದೇವರಾಜ ಅರಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು

***Abstract:***

*ಹಾಲೇರಿ ಮನೆತನವು ಕೊಡಗು ಜಿಲ್ಲೆಯ ಇತಿಹಾಸದಲ್ಲಿ ಪ್ರಮುಖ ರಾಜವಂಶವಾಗಿದ್ದು, ಕ್ರಿ.ಶ. ಹದಿನೇಳನೇ ಶತಮಾನದ ಆರಂಭದಲ್ಲಿ ಅಧಿಕಾರಕ್ಕೆ ಬಂದ ನಂತರ ಸುಮಾರು ಎರಡು ಶತಮಾನಗಳ ಕಾಲ ಕೊಡಗಿನ ರಾಜಕೀಯ, ಆಡಳಿತ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿತು. ಅವರು ಕೊಡಗಿನ ವಿವಿಧ ನಾಡುಗಳನ್ನು ಏಕೀಕರಿಸಿ ಬಲಿಷ್ಠ ಆಡಳಿತ ವ್ಯವಸ್ಥೆ ರೂಪಿಸಿಕೊಂಡು ಭೂಮಾಪನ, ತೆರಿಗೆ ಸಂಗ್ರಹ, ಗ್ರಾಮಾಡಳಿತ, ಸೈನಿಕ ಸಂಘಟನೆ ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ಸುಧಾರಿಸಿದರು. ಕೃಷಿ, ಅರಣ್ಯ ಸಂಪನ್ಮೂಲ ಬಳಕೆ, ವ್ಯಾಪಾರ ಹಾಗೂ ಮಾರುಕಟ್ಟೆಗಳ ಅಭಿವೃದ್ಧಿಗೆ ಉತ್ತೇಜನ ನೀಡಿ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡಿದರು. ದೇವಾಲಯಗಳು, ಮಠಗಳು ಮತ್ತು ಧಾರ್ಮಿಕ ಕೇಂದ್ರಗಳಿಗೆ ದತ್ತಿ ನೀಡುವ ಮೂಲಕ ಧಾರ್ಮಿಕ ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿದರು. ಪ್ರಸ್ತುತ ಅಧ್ಯಯನವು ಹಾಲೇರಿ ಅರಸರ ವಂಶಾವಳಿ, ಪ್ರಮುಖ ಆಡಳಿತ ಸಾಧನೆಗಳು, ರಾಜಕೀಯ ಸಂಘರ್ಷಗಳು, ನೆರೆ ರಾಜ್ಯಗಳೊಂದಿಗೆ ಸಂಬಂಧಗಳು ಮತ್ತು ಬ್ರಿಟಿಷರ ಆಳ್ವಿಕೆಯ ಸ್ಥಾಪನೆಗೆ ಕಾರಣವಾದ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತದೆ. ವೀರರಾಜೇಂದ್ರ, ಲಿಂಗರಾಜೇಂದ್ರ ಮತ್ತು ಚಿಕ್ಕವೀರರಾಜೇಂದ್ರರ ಆಡಳಿತ ಅವಧಿಯ ಬೆಳವಣಿಗೆಗಳಿಗೆ ವಿಶೇಷ ಗಮನ ನೀಡಲಾಗಿದೆ. ಶಾಸನಗಳು, ನಾಣ್ಯಗಳು, ಸರ್ಕಾರಿ ದಾಖಲೆಗಳು, ಗ್ಯಾಸೆಟಿಯರ್‌ಗಳು, ಪ್ರವಾಸಿಗರ ವೃತ್ತಾಂತಗಳು ಮತ್ತು ಇತಿಹಾಸದ ಪ್ರಾಥಮಿಕ ಹಾಗೂ ದ್ವಿತೀಯಕ ಮೂಲಗಳನ್ನು ಆಧರಿಸಿ ಸಂಶೋಧನೆ ನಡೆದಿದ್ದು, ಹಾಲೇರಿ ಮನೆತನವು ಕೊಡಗಿನ ರಾಜಕೀಯ ಸ್ಥಿರತೆ, ಆಡಳಿತದ ಅಭಿವೃದ್ಧಿ, ಧಾರ್ಮಿಕ ಸಹಬಾಳ್ವೆ, ಆರ್ಥಿಕ ಪ್ರಗತಿ ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿರುವುದು ಸ್ಪಷ್ಟವಾಗಿದೆ. ಇಂದಿಗೂ ಕೊಡಗಿನ ಐತಿಹಾಸಿಕ ಸ್ಮಾರಕಗಳು, ಅರಮನೆಗಳು, ದೇವಾಲಯಗಳು ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳಲ್ಲಿ ಹಾಲೇರಿ ಮನೆತನದ ಪ್ರಭಾವವನ್ನು ಗುರುತಿಸಬಹುದು.*

**Keywords:** *ಕೊಡಗು, ಹಾಲೇರಿ ಮನೆತನ, ರಾಜಕೀಯ ಇತಿಹಾಸ, ಆಡಳಿತ ವ್ಯವಸ್ಥೆ, ಸಾಂಸ್ಕೃತಿಕ ಪರಂಪರೆ, ಧಾರ್ಮಿಕ ಆಶ್ರಯ, ಬ್ರಿಟಿಷ್–ಕೊಡಗು ಸಂಬಂಧಗಳು*

## ಪೀಠಿಕೆ

ಕೊಡಗು ಜಿಲ್ಲೆ ತನ್ನ ವಿಶಿಷ್ಟ ಭೌಗೋಳಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸದ ಮೂಲಕ ಕರ್ನಾಟಕದ ಪ್ರಮುಖ ಪ್ರಾದೇಶಿಕ ರಾಜ್ಯವಾಗಿದೆ. ಈ ಭಾಗದಲ್ಲಿ ಹಾಲೇರಿ ಮನೆತನವು

***Please cite this article as:*** ಶೋಭಾ, ಹೆಚ್.ಎಲ್. (2026). ಕೊಡಗಿನ ಹಾಲೇರಿ ಮನೆತನದ ಪರಂಪರೆ ಕುರಿತ ಒಂದು ವಿಮರ್ಶಾತ್ಮಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 74–80

ಸುಮಾರು ಎರಡು ಶತಮಾನಗಳ ಕಾಲ ಸ್ಥಿರ ಆಡಳಿತದಿಂದ ಕೊಡಗಿನ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಹಾಲೇರಿ ಅರಸರು ಸ್ಥಳೀಯ ನಾಡುಗಳನ್ನು ಏಕೀಕರಿಸಿ ಕೇಂದ್ರಿಕೃತ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದರು. ಭೂ ಕಂದಾಯ, ಗ್ರಾಮಾಡಳಿತ, ನ್ಯಾಯಾಂಗ ಮತ್ತು ಸೈನಿಕ ಸಂಘಟನೆಗಳನ್ನು ಸುಧಾರಿಸಿ ರಾಜಕೀಯ ಮತ್ತು ಆರ್ಥಿಕ ಸ್ಥಿರತೆ ತಂದರು. ಕೃಷಿ ಮತ್ತು ವ್ಯಾಪಾರ ಕ್ಷೇತ್ರಗಳ ಪ್ರಗತಿಗೆ ಸಹಾಯ ಮಾಡಿದರೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ದತ್ತಿ ನೀಡಿ ಧಾರ್ಮಿಕ ಸಹಿಷ್ಣುತೆಯನ್ನೂ ಬೆಳೆಸಿದರು. ಮಡಿಕೇರಿ ಕೋಟೆ, ಅರಮನೆಗಳು ಮತ್ತು ದೇವಾಲಯಗಳು ಹಾಲೇರಿ ಆಡಳಿತದ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪರಂಪರೆಯ ಸಾಕ್ಷ್ಯಗಳಾಗಿವೆ. ಹಾಲೇರಿ ರಾಜವಂಶವು ನೆರೆಯ ಮೈಸೂರು, ಇಕ್ಕೇರಿ, ಕೇಲಾಡಿ ಹಾಗೂ ಬ್ರಿಟಿಷರಿಂದ ರಾಜತಾಂತ್ರಿಕ ಮತ್ತು ಸೈನಿಕ ಸಂಬಂಧಗಳನ್ನು ಹೊಂದಿದ್ದು, 1834ರಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಗಾದುದು ಅವರ ಆಡಳಿತ ಅಂತ್ಯಕ್ಕೆ ಸೂಚಕವಾಗಿದೆ. ಈ ಅಧ್ಯಯನವು ಶಾಸನಗಳು, ದಾಖಲೆಗಳು, ಪ್ರವಾಸಿಗರ ವೃತ್ತಾಂತಗಳು ಮತ್ತು ಆಧುನಿಕ ಸಂಶೋಧನೆಗಳ ಆಧಾರದ ಮೇಲೆ ಹಾಲೇರಿ ಮನೆತನದ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ. ಇದರಿಂದ ಕೊಡಗಿನ ಮತ್ತು ಕರ್ನಾಟಕದ ಪ್ರಾದೇಶಿಕ ರಾಜವಂಶಗಳ ಇತಿಹಾಸದ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

## ಅಧ್ಯಯನದ ಹಿನ್ನೆಲೆ

ಕರ್ನಾಟಕದ ಪ್ರಾದೇಶಿಕ ರಾಜವಂಶಗಳಲ್ಲಿ ಹಾಲೇರಿ ಮನೆತನವು ಕೊಡಗಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಪಶ್ಚಿಮ ಘಟ್ಟಗಳ ಮಡಿಲಿನ ಪರ್ವತಮಯ ಪ್ರದೇಶವಾದ ಕೊಡಗು, ನೈಸರ್ಗಿಕ ಸಂಪನ್ಮೂಲಗಳು ಮತ್ತು ಕಾವೇರಿ ನದಿಯ ಉಗಮಸ್ಥಾನದಿಂದ ಧಾರ್ಮಿಕ ಮತ್ತು ಆರ್ಥಿಕ ಮಹತ್ವ ಪಡೆದಿದೆ. ಹಾಲೇರಿ ಅರಸರು ಸ್ಥಳೀಯ ನಾಡುಗಳನ್ನು ಏಕೀಕರಿಸಿ ಕೇಂದ್ರಿಕೃತ ಆಡಳಿತ ವ್ಯವಸ್ಥೆ ನಡೆಸಿದರು. ಭೂ ಕಂದಾಯ, ನ್ಯಾಯಾಂಗ, ಸೈನಿಕ ಸಂಘಟನೆ ಮತ್ತು ಆಡಳಿತ ಸುಧಾರಣೆಗಳ ಮೂಲಕ ರಾಜಕೀಯ ಸ್ಥಿರತೆ ಮತ್ತು ಆರ್ಥಿಕ ಪ್ರಗತಿಗೆ ಸಹಾಯ ಮಾಡಿದರು. ಕೃಷಿ, ಅರಣ್ಯ ಸಂಪನ್ಮೂಲ ಹಾಗೂ ಕಾಫಿ ಬೆಳೆ ಪರಿಚಯದ ಮೂಲಕ ಕೊಡಗಿನ ಆರ್ಥಿಕತೆಯನ್ನು ಬಲಪಡಿಸಿದರು. ಸಾಂಸ್ಕೃತಿಕವಾಗಿ, ಹಾಲೇರಿ ಅರಸರು ಕೊಡವ ಸಂಪ್ರದಾಯ, ಧಾರ್ಮಿಕ ಸಂಸ್ಥೆಗಳು, ದೇವಾಲಯಗಳು ಮತ್ತು ಮಠಗಳಿಗೆ ರಾಜಾಶ್ರಯ ನೀಡಿ ಸಾಂಸ್ಕೃತಿಕ ಪರಂಪರೆಯ ನಿರಂತರತೆ ಕಾಯ್ದುಕೊಂಡರು. ರಾಜತಾಂತ್ರಿಕವಾಗಿ, ಬ್ರಿಟಿಷರು ಸೇರಿದಂತೆ ನೆರೆಯ ಸಂಸ್ಥಾನಗಳ ಜೊತೆ ಮಿತ್ರತ್ವ ಮತ್ತು ಸಂಘರ್ಷದ ಸಂಬಂಧಗಳನ್ನು ಹೊಂದಿ, 1834ರಲ್ಲಿ ಬ್ರಿಟಿಷರ ಆಡಳಿತಕ್ಕೆ ಕೊಡಗನ್ನು ಒಪ್ಪಿಸುವ ಮೂಲಕ ಹಾಲೇರಿ ರಾಜವಂಶದ ಸ್ವತಂತ್ರ ಆಡಳಿತಕ್ಕೆ ಅಂತ್ಯವಾಯಿತು. ಹಾಲೇರಿ ಮನೆತನದ ಇತಿಹಾಸವು ರಾಜಕೀಯ ಘಟನಾಕ್ರಮಗಳ ಪಕ್ಕಕ್ಕೆ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನೂ ಒಳಗೊಂಡಿದೆ. ಆದರೆ ಈ ವಿಸ್ತೃತ ಆಯಾಮಗಳ ಅಧ್ಯಯನವು ಕಡಿಮೆಯಾಗಿದೆ. ಈ ಅಧ್ಯಯನವು ಹಾಲೇರಿ ಮನೆತನದ ವಿವಿಧ ಆಯಾಮಗಳನ್ನು ಸಮಗ್ರವಾಗಿ ವಿಶ್ಲೇಷಿಸುವುದರೊಂದಿಗೆ ಕೊಡಗಿನ ಮತ್ತು ಕರ್ನಾಟಕದ ಪ್ರಾದೇಶಿಕ ರಾಜವಂಶಗಳ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ನೀಡಲು ಉದ್ದೇಶಿಸಿದೆ.

## ಕೊಡಗಿನ ಭೌಗೋಳಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಿಚಯ

ಕೊಡಗು ಕರ್ನಾಟಕದ ನೈಋತ್ಯ ಭಾಗದಲ್ಲಿ ಪಶ್ಚಿಮ ಘಟ್ಟಗಳ ಮಡಿಲಿನಲ್ಲಿ ನೆಲೆಗೊಂಡಿದ್ದು, ತನ್ನ ನೈಸರ್ಗಿಕ ಸೌಂದರ್ಯ, ಐತಿಹಾಸಿಕ ಪರಂಪರೆ,

ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ರಾಜಕೀಯ ಬೆಳವಣಿಗೆಗಳಿಂದ ವಿಶೇಷ ಸ್ಥಾನ ಹೊಂದಿದೆ. ಕಾವೇರಿ ನದಿಯ ಉಗಮಸ್ಥಾನ ತಲಕಾವೇರಿಯು ಕೊಡಗಿಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಪರಿಸರದ ದೃಷ್ಟಿಯಿಂದ ಮಹತ್ವವನ್ನು ನೀಡುತ್ತದೆ. ಭೌಗೋಳಿಕವಾಗಿ; ಕೊಡಗು 4,102 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ 900–1,750 ಮೀಟರ್ ಎತ್ತರದಲ್ಲಿದ್ದು, ಹಾಸನ, ಮೈಸೂರು, ಕೇರಳದ ಕಣ್ಣೂರು, ವಯನಾಡು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಗಡಿಗಳನ್ನು ಹೊಂದಿದೆ. ಬ್ರಹ್ಮಗಿರಿ, ಪುಷ್ಪಗಿರಿ ಮತ್ತು ತಾಡಿಯಂಡಮೋಳ್ ಪರ್ವತಶ್ರೇಣಿಗಳು ಹಾಗೂ ದಟ್ಟ ಅರಣ್ಯಗಳು, ನದಿಗಳು ಮತ್ತು ಜಲಪಾತಗಳು ವಿವಿಧ ಜೀವವೈವಿಧ್ಯತೆಯನ್ನು ಹೊಂದುತ್ತವೆ. ಕಾವೇರಿ, ಲಕ್ಷ್ಮಣತೀರ್ಥ, ಹಾರಂಗಿ ಮತ್ತು ಇತರೆ ನದಿಗಳು ಕೊಡಗಿನ ಜೀವನ ಮತ್ತು ಧಾರ್ಮಿಕ ಆಚರಣೆಗಳ ಕೇಂದ್ರವಾಗಿವೆ. ಕೊಡವ ಸಮಾಜವು ಕಾವೇರಿ ನದಿಯನ್ನು ದೈವಸ್ವರೂಪವಾಗಿ ಪೂಜಿಸುತ್ತಿದ್ದು, ಕಾವೇರಿ ಸಂಕ್ರಮಣ ಹಬ್ಬವನ್ನು ಆಚರಿಸುತ್ತದೆ. ಅರಣ್ಯ ಸಂಪತ್ತು ಮತ್ತು ಜೀವವೈವಿಧ್ಯವು ಕೊಡಗನ್ನು ಸೈನಿಕವಾಗಿ ಸುರಕ್ಷಿತ ಹಾಗೂ ಆರ್ಥಿಕವಾಗಿ ಸಮೃದ್ಧ ಪ್ರದೇಶವನ್ನಾಗಿಸಿದೆ. ಸಾಂಸ್ಕೃತಿಕವಾಗಿ, ಕೊಡಗು ಬಹುಜನಾಂಗೀಯ ಮತ್ತು ಬಹುಧಾರ್ಮಿಕವಾಗಿದೆ. ಕೊಡವರು, ಯೆರವರು, ಕುರುಬರು, ಗೌಡರು, ಜೇನುಕುರುಬರು ಸೇರಿದಂತೆ ವಿವಿಧ ಸಮುದಾಯಗಳು ಪರಸ್ಪರ ಸಹಬಾಳ್ವೆಯೊಂದಿಗೆ ಬದುಕುತ್ತಾರೆ. ಒಕ್ಕ (ಕುಲ), ಐನ್ಮನೆ (ಪಾರಂಪರಿಕ ಮನೆ), ಕೈಲ್‌ಪೊಳ್ದ್, ಪುತ್ತರಿ, ಕಾವೇರಿ ಸಂಕ್ರಮಣ ಮತ್ತು ಆಯುಧ ಪೂಜೆಯಂತಹ ಆಚರಣೆಗಳು ಕೊಡವ ಸಂಸ್ಕೃತಿಯ ಮುಖ್ಯ ಅಂಶಗಳಾಗಿವೆ. ಧಾರ್ಮಿಕವಾಗಿ; ಶೈವ, ವೈಷ್ಣವ, ಶಾಕ್ತ, ಜೈನ, ಇಸ್ಲಾಂ ಧರ್ಮಗಳ ಪ್ರಭಾವ ಕಂಡುಬರುತ್ತದೆ. ಭಗವತಿ, ಮಹಾದೇವ, ಸುಬ್ರಹ್ಮಣ್ಯ, ಕಾವೇರಮ್ಮ ಸೇರಿದಂತೆ ವಿವಿಧ ದೇವತೆಗಳ ಆರಾಧನೆ ಜನಜೀವನದ ಭಾಗವಾಗಿದೆ. ದೇವರಕಾಡುಗಳ ಸಂಪ್ರದಾಯವು ಪರಿಸರ ಸಂರಕ್ಷಣೆಯೂ ಧಾರ್ಮಿಕ ನಂಬಿಕೆಗಳ ಸಂಯೋಜನೆಯಾಗಿದೆ. ಹಾಲೇರಿ ಅರಸರು ಧಾರ್ಮಿಕ ಸಂಸ್ಥೆಗಳಿಗೆ ದತ್ತಿ ನೀಡಿ ಪರಂಪರೆ ಬೆಳವಣಿಗೆಗೆ ನೆರವೇರಿಸಿದರು. ಐತಿಹಾಸಿಕವಾಗಿ, ಕೊಡಗು ವಿವಿಧ ರಾಜಕೀಯ ಶಕ್ತಿಗಳ ಸಂಪರ್ಕದಲ್ಲಿದ್ದು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ಸ್ವತಂತ್ರ ಅಥವಾ ಸಾಮಂತ ಪ್ರದೇಶವಾಗಿತ್ತು. ವಿಜಯನಗರ ಪತನದ ಅನಂತರ ಹಾಲೇರಿ ಮನೆತನ ಅಧಿಕಾರಕ್ಕೆ ಬಂದಿದ್ದು, ವಿವಿಧ ನಾಡುಗಳನ್ನು ಏಕೀಕರಿಸಿ ರಾಜಕೀಯ ಸ್ಥಿರತೆಯನ್ನು ತಂದುಕೊಟ್ಟಿತು. ಮಡಿಕೇರಿ ರಾಜಧಾನಿಯಾಗಿ ಬೆಳೆಯಿತು ಮತ್ತು ಕೋಟೆ, ಅರಮನೆ, ದೇವಾಲಯಗಳು ಸೇರಿದಂತೆ ಆಡಳಿತ ಮತ್ತು ಸೈನಿಕ ನೆಲೆಗಳನ್ನು ಹೊಂದಿತು. ಹಾಲೇರಿ ಆಡಳಿತದ ಕಾಲದಲ್ಲಿ ಭೂ ಕಂದಾಯ, ನ್ಯಾಯಾಂಗ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳು ಪುನರ್‌ಸಂಘಟಿತವಾಗಿದವು. ಆರ್ಥಿಕವಾಗಿ, ಕೃಷಿ ಮುಖ್ಯವಾಗಿದೆ. ಅಕ್ಕಿ, ಏಲಕ್ಕಿ, ಮೆಣಸು, ಶುಂಠಿ ಮತ್ತು ಮಸಾಲೆ ಬೆಳೆಗಳು ಆರ್ಥಿಕತೆಯ ಆಸೆರೆಯಾಗಿರುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಕಾಫಿ ಬೆಳೆ ಬೆಳವಣಿಗೆಯಿಂದ ಆರ್ಥಿಕತೆಯಲ್ಲಿ ನವೀನತೆ ಬಂತು. ಮಂಗಳೂರು ಬಂದರಿನೊಂದಿಗೆ ವ್ಯಾಪಾರ ಸಂಬಂಧಗಳು ಮಾರುಕಟ್ಟೆಯನ್ನು ವಿಸ್ತರಿಸಿದವು. ಸಾಂಸ್ಕೃತಿಕವಾಗಿ, ಜನಪದ ಗೀತೆಗಳು, ನೃತ್ಯಗಳು, ಯುದ್ಧಕಲೆ, ಉಡುಪು, ಆಹಾರ ಪದ್ಧತಿ ಮತ್ತು ಕುಟುಂಬ ವ್ಯವಸ್ಥೆಗಳು ಕೊಡಗಿನ ವೈಶಿಷ್ಟ್ಯವನ್ನು ಪ್ರತಿಬಿಂಬಿಸುತ್ತವೆ. ಹಾಲೇರಿ ಮನೆತನವು ಈ ಪರಂಪರೆಗಳನ್ನು ಕಾಪಾಡಿ, ರಾಜಕೀಯ–ಆಡಳಿತಾತ್ಮಕ ವ್ಯವಸ್ಥೆಗಳ ಮೂಲಕ ಅವುಗಳ ಬೆಳವಣಿಗೆಗೆ ಸಹಕಾರ ನೀಡಿತು.

**ಹಾಲೇರಿ ಮನೆತನದ ಉದ್ಭವ ಮತ್ತು ವಂಶಪರಂಪರೆ**

ಕೊಡಗಿನ ಇತಿಹಾಸದಲ್ಲಿ ಹಾಲೇರಿ ಮನೆತನವು ಅತ್ಯಂತ ಮಹತ್ವದ ರಾಜವಂಶವಾಗಿದೆ. ಸುಮಾರು ಕ್ರಿ.ಶ. ಹದಿನೇಳನೆಯ ಶತಮಾನದ ಆರಂಭದಿಂದ ಕ್ರಿ.ಶ. 1834ರವರೆಗೆ ಈ ಮನೆತನವು ಕೊಡಗನ್ನು ಆಳುತ್ತ ರಾಜಕೀಯ, ಆಡಳಿತಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಗಮನಾರ್ಹ ಕೊಡುಗೆ ನೀಡಿತು. ಹಾಲೇರಿ ಅರಸರ ಉದಯವು ಕೊಡಗಿನ ಇತಿಹಾಸದಲ್ಲಿ ಹೊಸ ರಾಜಕೀಯ ಯುಗಕ್ಕೆ ನಾಂದಿ ಹಾಡಿದ ಘಟನೆಯಾಗಿದೆ. ವಿಜಯನಗರ ಸಾಮ್ರಾಜ್ಯದ ಪತನದ ಅನಂತರ ದಕ್ಷಿಣ ಭಾರತದಲ್ಲಿ ಉಂಟಾದ ರಾಜಕೀಯ ಅಸ್ಥಿರತೆಯ ಸಂದರ್ಭದಲ್ಲಿ ಈ ರಾಜವಂಶವು ಅಧಿಕಾರವನ್ನು ಸಂಘಟಿಸಿ ಪ್ರಾದೇಶಿಕ ರಾಜ್ಯವನ್ನು ನಿರ್ಮಿಸಿತು.

**ಹಾಲೇರಿ ಮನೆತನದ ಮೂಲ**

ಹಾಲೇರಿ ಮನೆತನದ ಮೂಲದ ಕುರಿತು ಇತಿಹಾಸಕಾರರಲ್ಲಿ ಏಕಾಭಿಪ್ರಾಯವಿಲ್ಲ. ಕೆಲವು ವಂಶಾವಳಿಗಳು ಈ ಮನೆತನವನ್ನು ಇಕ್ಕೇರಿ–ಕೆಳದಿ ನಾಯಕರೊಂದಿಗೆ ಸಂಬಂಧಿಸುತ್ತವೆ. ಇನ್ನು ಕೆಲವು ಸ್ಥಳೀಯ ಕೊಡವ ಪರಂಪರೆಯೊಂದಿಗೆ ಜೋಡಿಸುತ್ತವೆ. ಬ್ರಿಟಿಷ್ ಆಡಳಿತದ ದಾಖಲೆಗಳು, ಕೊಡಗಿನ ರಾಜವಂಶಾವಳಿಗಳು ಹಾಗೂ ಸ್ಥಳೀಯ ಐತಿಹಾಸಿಕ ಸಂಪ್ರದಾಯಗಳ ತುಲನಾತ್ಮಕ ಅಧ್ಯಯನದಿಂದ, ಹಾಲೇರಿ ಗ್ರಾಮದಿಂದ ಬಂದ ಒಬ್ಬ ನಾಯಕ ಕ್ರಮೇಣ ಕೊಡಗಿನ ರಾಜಕೀಯದಲ್ಲಿ ಪ್ರಾಬಲ್ಯ ಸಾಧಿಸಿ ಹೊಸ ಆಡಳಿತ ವ್ಯವಸ್ಥೆಯನ್ನು ರೂಪಿಸಿದನೆಂಬ ಅಭಿಪ್ರಾಯವು ಹೆಚ್ಚು ಸ್ವೀಕಾರಾರ್ಹವಾಗಿದೆ. ಸಂಪ್ರದಾಯದ ಪ್ರಕಾರ ಹಾಲೇರಿ ಗ್ರಾಮದ ಮೂಲಪುರುಷನಾದ ಮುದ್ದುರಾಜ ಅಥವಾ ವೀರರಾಜ ಕೊಡಗಿನ ಆಂತರಿಕ ರಾಜಕೀಯ ಪರಿಸ್ಥಿತಿಯನ್ನು ಸಮರ್ಥವಾಗಿ ಬಳಸಿಕೊಂಡು ತನ್ನ ಅಧಿಕಾರವನ್ನು ಸ್ಥಾಪಿಸಿದನು. ಅನಂತರ ಅವನು ವಿವಿಧ ನಾಡುಗಳನ್ನು ತನ್ನ ಅಧೀನಕ್ಕೆ ಒಳಪಡಿಸಿ ಮಡಿಕೇರಿಯನ್ನು ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸಿದನು. ಮಡಿಕೇರಿ ಕೋಟೆಯ ನಿರ್ಮಾಣ ಮತ್ತು ರಾಜಧಾನಿಯ ಸಂಘಟನೆಯು ಹಾಲೇರಿ ಆಡಳಿತದ ಬಲವರ್ಧನೆಯ ಸಂಕೇತಗಳಾಗಿವೆ.

**ವಿಜಯನಗರೋತ್ತರ ರಾಜಕೀಯ ಹಿನ್ನೆಲೆ**

ಕ್ರಿ.ಶ. 1565ರ ತಾಳಿಕೋಟೆ ಯುದ್ಧದ ಅನಂತರ ವಿಜಯನಗರ ಸಾಮ್ರಾಜ್ಯ ದುರ್ಬಲಗೊಂಡಿತು. ಇದರ ಪರಿಣಾಮವಾಗಿ ದಕ್ಷಿಣ ಭಾರತದಲ್ಲಿ ಅನೇಕ ಪ್ರಾದೇಶಿಕ ಶಕ್ತಿಗಳು ಉದಯಿಸಿದವು. ಕೆಳದಿ ನಾಯಕರು, ಮೈಸೂರು ಒಡೆಯರು, ಬಿದನೂರು ಆಡಳಿತಗಾರರು ಹಾಗೂ ಮಲಬಾರದ ಸ್ಥಳೀಯ ಅಧಿಕಾರಿಗಳು ತಮ್ಮ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸಿದರು. ಪರ್ವತಮಯ ಮತ್ತು ಸ್ವಾಭಾವಿಕ ರಕ್ಷಣಾ ವ್ಯವಸ್ಥೆಯನ್ನು ಹೊಂದಿದ್ದ ಕೊಡಗು ಈ ರಾಜಕೀಯ ಪೈಪೋಟಿಯಲ್ಲಿ ಮಹತ್ವದ ಪ್ರದೇಶವಾಗಿತ್ತು. ಈ ಸಂದರ್ಭದಲ್ಲಿ ಹಾಲೇರಿ ಮನೆತನವು ಸ್ಥಳೀಯ ಆಡಳಿತಗಾರರೊಂದಿಗೆ ಹೊಂದಾಣಿಕೆ ಹಾಗೂ ಅಗತ್ಯವಿದ್ದಲ್ಲಿ ಸೈನಿಕ ಕ್ರಮಗಳ ಮೂಲಕ ತನ್ನ ಅಧಿಕಾರವನ್ನು ಬಲಪಡಿಸಿತು. ಹಂತ ಹಂತವಾಗಿ ಕೊಡಗಿನ ವಿವಿಧ ನಾಡುಗಳನ್ನು ಏಕೀಕರಿಸಿ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ರೂಪಿಸಲಾಯಿತು.

**ಹಾಲೇರಿ ರಾಜ್ಯದ ಸಂಘಟನೆ**

ಹಾಲೇರಿ ಆಡಳಿತದ ಪ್ರಮುಖ ಸಾಧನೆಯೆಂದರೆ; ಕೊಡಗಿನ ವಿವಿಧ ಪ್ರಾದೇಶಿಕ ಘಟಕಗಳನ್ನು ಒಂದು ರಾಜಕೀಯ ಘಟಕವಾಗಿ ರೂಪಿಸಿರುವುದು. ನಾಡುಗಳನ್ನು ಆಡಳಿತಾತ್ಮಕ ಘಟಕಗಳಾಗಿ ಉಳಿಸಿಕೊಂಡು ಅವುಗಳ ಮೇಲೆ ಕೇಂದ್ರಾಡಳಿತದ ನಿಯಂತ್ರಣವನ್ನು ಸ್ಥಾಪಿಸಲಾಯಿತು. ಭೂ ಕಂದಾಯ, ನ್ಯಾಯಾಂಗ, ಸೈನಿಕ ಸಂಘಟನೆ ಮತ್ತು ರಾಜಸ್ವ ವ್ಯವಸ್ಥೆಗಳನ್ನು ಮರುಸಂಘಟಿಸಲಾಯಿತು.

ಸ್ಥಳೀಯ ಮುಖ್ಯಸ್ಥರ ಅಧಿಕಾರವನ್ನು ಸಂಪೂರ್ಣವಾಗಿ ರದ್ದುಗೊಳಿಸದೆ, ಅವರನ್ನು ರಾಜಕೀಯ ಆಡಳಿತದ ಭಾಗವನ್ನಾಗಿ ಮಾಡಿಕೊಳ್ಳುವುದು ಹಾಲೇರಿ ಅರಸರ ಪ್ರಮುಖ ಆಡಳಿತ ವೈಶಿಷ್ಟ್ಯವಾಗಿತ್ತು. ಇದರಿಂದ ಆಡಳಿತದಲ್ಲಿ ಸ್ಥಿರತೆ ಉಂಟಾಯಿತು ಹಾಗೂ ಜನರ ಸಹಕಾರ ದೊರೆಯಿತು.

**ಹಾಲೇರಿ ವಂಶಪರಂಪರೆ**

ಹಾಲೇರಿ ಮನೆತನದ ವಂಶಾವಳಿಯಲ್ಲಿ ಹಲವು ಅರಸರು ಆಡಳಿತ ನಡೆಸಿದರೂ, ಕೆಲವು ಆಡಳಿತಗಾರರು ವಿಶೇಷವಾಗಿ ಐತಿಹಾಸಿಕ ಮಹತ್ವ ಪಡೆದಿದ್ದಾರೆ. ಹಾಲೇರಿ ಆಡಳಿತದ ಸಂಸ್ಥಾಪಕನಾಗಿ ಪರಿಗಣಿಸಲ್ಪಡುವ ಮುದ್ದುರಾಜನು ಮಡಿಕೇರಿಯನ್ನು ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸಿ ಆಡಳಿತ ವ್ಯವಸ್ಥೆಗೆ ಭದ್ರ ಅಡಿಪಾಯ ಹಾಕಿದನು. ದೊಡ್ಡ ವೀರರಾಜೇಂದ್ರ ಎಂಬುವನು ಆಡಳಿತ ವಿಸ್ತರಣೆ, ಸೈನಿಕ ಸಂಘಟನೆ ಮತ್ತು ನೆರೆಯ ರಾಜ್ಯಗಳೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಿದ ಪ್ರಮುಖ ಅರಸರಲ್ಲಿ ಒಬ್ಬನು. ಲಿಂಗರಾಜೇಂದ್ರ ಎಂಬುವನು ಧಾರ್ಮಿಕ ದತ್ತಿಗಳು, ದೇವಾಲಯಗಳ ಅಭಿವೃದ್ಧಿ, ಆಡಳಿತ ಸುಧಾರಣೆ ಹಾಗೂ ಸಾರ್ವಜನಿಕ ಕಾರ್ಯಗಳಿಗೆ ಆದ್ಯತೆ ನೀಡಿದನು. ಅವನ ಕಾಲದಲ್ಲಿ ಕೊಡಗಿನ ಆಡಳಿತ ವ್ಯವಸ್ಥೆ ಮತ್ತಷ್ಟು ಸಂಘಟಿತವಾಯಿತು. ವೀರರಾಜೇಂದ್ರ ಎಂಬುವನು ಹಾಲೇರಿ ಮನೆತನದ ಶ್ರೇಷ್ಠ ಆಡಳಿತಗಾರರಲ್ಲಿ ಒಬ್ಬನೆಂದು ಪರಿಗಣಿಸಲ್ಪಡುತ್ತಾನೆ. ಟಿಪ್ಪು ಸುಲ್ತಾನನ ವಿರುದ್ಧ ಬ್ರಿಟಿಷರೊಂದಿಗೆ ಮೈತ್ರಿ ಮಾಡಿಕೊಂಡು ಕೊಡಗಿನ ಸ್ವಾಯತ್ತತೆಯನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದನು. ಅವನ ಆಡಳಿತದಲ್ಲಿ ಸೈನಿಕ ಸಾಮರ್ಥ್ಯ ಮತ್ತು ರಾಜತಾಂತ್ರಿಕ ನೈಪುಣ್ಯ ಸ್ಪಷ್ಟವಾಗಿ ಗೋಚರಿಸುತ್ತವೆ. ಚಿಕ್ಕ ವೀರರಾಜೇಂದ್ರ ಎಂಬುವನು ಹಾಲೇರಿ ಮನೆತನದ ಕೊನೆಯ ಆಡಳಿತಗಾರ. ಆಂತರಿಕ ರಾಜಕೀಯ ಸಂಘರ್ಷಗಳು, ಆಡಳಿತಾತ್ಮಕ ಸಮಸ್ಯೆಗಳು ಮತ್ತು ಬ್ರಿಟಿಷರೊಂದಿಗೆ ಉಂಟಾದ ಭಿನ್ನಾಭಿಪ್ರಾಯಗಳು ಅವನ ಆಡಳಿತವನ್ನು ದುರ್ಬಲಗೊಳಿಸಿದವು. ಅಂತಿಮವಾಗಿ ಕ್ರಿ.ಶ. 1834ರಲ್ಲಿ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡು ಹಾಲೇರಿ ಆಡಳಿತಕ್ಕೆ ಅಂತ್ಯ ಹಾಡಿದರು.

**ಹಾಲೇರಿ ಆಡಳಿತದ ವೈಶಿಷ್ಟ್ಯತೆಗಳು**

ಹಾಲೇರಿ ಅರಸರು ಕೊಡಗಿನ ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು. ಪರ್ವತ ಪ್ರದೇಶದ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಕೋಟೆಗಳು, ಕಾವಲು ಕೇಂದ್ರಗಳು ಮತ್ತು ಸೈನಿಕ ನೆಲೆಗಳನ್ನು ನಿರ್ಮಿಸಿದರು. ಭೂ ಕಂದಾಯ ಸಂಗ್ರಹವನ್ನು ನಿಯಮಿತಗೊಳಿಸಿದರು ಹಾಗೂ ಸ್ಥಳೀಯ ಉತ್ಪಾದನೆಯ ಆಧಾರದ ಮೇಲೆ ತೆರಿಗೆ ವ್ಯವಸ್ಥೆಯನ್ನು ಜಾರಿಗೊಳಿಸಿದರು. ದೇವಾಲಯಗಳು, ದೇವರ ಕಾಡುಗಳು, ಮಠಗಳು ಹಾಗೂ ಸ್ಥಳೀಯ ಧಾರ್ಮಿಕ ಕೇಂದ್ರಗಳಿಗೆ ರಾಜಾಶ್ರಯ ನೀಡಲಾಯಿತು. ಕೊಡವ ಸಂಪ್ರದಾಯಗಳು, ಒಕ್ಕ ಪದ್ಧತಿ ಮತ್ತು ಐನ್ಮನೆ ಸಂಸ್ಕೃತಿಗೆ ಗೌರವ ನೀಡುವುದರ ಮೂಲಕ ಆಡಳಿತ ಮತ್ತು ಸಮಾಜದ ನಡುವೆ ಪರಸ್ಪರ ವಿಶ್ವಾಸವನ್ನು ಬೆಳೆಸಲಾಯಿತು.

**ಇತಿಹಾಸ ಲೇಖನದಲ್ಲಿ ಹಾಲೇರಿ ಮನೆತನ**

ಹಾಲೇರಿ ಮನೆತನದ ಕುರಿತು ಮಾಹಿತಿ ವಿವಿಧ ಮೂಲಗಳಲ್ಲಿ ಲಭ್ಯವಿದೆ. ಬ್ರಿಟಿಷ್ ಅಧಿಕಾರಿಗಳ ವರದಿಗಳು, ಮೈಸೂರು ಮತ್ತು ಕೊಡಗು ಗ್ಯಾಸೆಟಿಯರ್‌ಗಳು, ಸ್ಥಳೀಯ ವಂಶಾವಳಿಗಳು, ದೇವಾಲಯ ಶಾಸನಗಳು ಮತ್ತು ಜನಪದ ಪರಂಪರೆಗಳು ಪ್ರಮುಖ ಮೂಲಗಳಾಗಿವೆ. ಆದರೆ ಈ ಮೂಲಗಳಲ್ಲಿ ಕೆಲವೊಮ್ಮೆ ಪರಸ್ಪರ ಭಿನ್ನಾಭಿಪ್ರಾಯಗಳು ಕಂಡುಬರುವುದರಿಂದ, ಸಂಶೋಧಕರು ತುಲನಾತ್ಮಕ ಹಾಗೂ ವಿಮರ್ಶಾತ್ಮಕ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಆಧುನಿಕ ಇತಿಹಾಸಕಾರರು ಹಾಲೇರಿ ಆಡಳಿತವನ್ನು ಕೇವಲ ರಾಜಕೀಯ ಇತಿಹಾಸದ ದೃಷ್ಟಿಯಿಂದ ಮಾತ್ರವಲ್ಲದೆ,

ಸಮಾಜೋ–ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಪರಿವರ್ತನೆಗಳ ದೃಷ್ಟಿಯಿಂದಲೂ ಅಧ್ಯಯನ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಲೇರಿ ಮನೆತನವು ಕೊಡಗಿನ ರಾಜ್ಯ ನಿರ್ಮಾಣ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ ಎಂಬುದು ಸ್ಪಷ್ಟವಾಗುತ್ತದೆ.

**ಉಪಸಂಹಾರ**

ಹಾಲೇರಿ ಮನೆತನವು ಕೊಡಗಿನ ಇತಿಹಾಸದಲ್ಲಿ ಸುಮಾರು ಎರಡು ಶತಮಾನಗಳ ಅಂದರೆ; ಕ್ರಿ.ಶ. 1600–1834ರವರೆಗೆ ರಾಜಕೀಯ, ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಪರಂಪರೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅವರು ಪ್ರಾದೇಶಿಕ ರಾಜ್ಯವನ್ನು ರೂಪಿಸಿ, ಆಡಳಿತ ವ್ಯವಸ್ಥೆಯನ್ನು ಸದೃಢಗೊಳಿಸಿ, ಸಾಮಾಜಿಕ ಸ್ಥಿರತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿದರು. ವಿಜಯನಗರ ಪತನದ ನಂತರದ ರಾಜಕೀಯ ಅಸ್ಥಿರತೆಯ ನಡುವೆ ಹಾಲೇರಿ ಮನೆತನವು ಕೇಂದ್ರೀಕೃತ ಆಡಳಿತ ವ್ಯವಸ್ಥೆ ಸ್ಥಾಪಿಸಿ, ಸ್ಥಳೀಯ ಸಂಪ್ರದಾಯಗಳಿಗೆ ಗೌರವ ನೀಡುವ ಮೂಲಕ ಆಡಳಿತದಲ್ಲಿ ಸ್ಥಿರತೆ ಮತ್ತು ರಾಜ–ಪ್ರಜೆ ವಿಶ್ವಾಸವನ್ನು ಹೆಚ್ಚಿಸಿತು. ಅವರು ಭೂ ಕಂದಾಯ, ನ್ಯಾಯಾಂಗ, ಗ್ರಾಮಾಡಳಿತ ಮತ್ತು ಸೈನಿಕ ಸಂಘಟನೆಯಲ್ಲಿ ಸುಧಾರಣೆಗಳನ್ನು ಜಾರಿಗೊಳಿಸಿ, ಮಡಿಕೇರಿಯನ್ನು ರಾಜಧಾನಿಯಾಗಿ ಅಭಿವೃದ್ಧಿಪಡಿಸಿ, ಕೊಡಗಿನ ರಾಜಕೀಯ, ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದರು. ಧಾರ್ಮಿಕ ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಪೋಷಣೆಯ ಮೂಲಕ ದೇವಾಲಯಗಳು, ಮಠಗಳು, ಕೊಡವ ಸಮುದಾಯದ ಆಚರಣೆಗಳಿಗೆ ರಾಜಾಶ್ರಯ ನೀಡಿದರು. ಪ್ರಕೃತಿಯೊಂದಿಗೆ ಬೆಸೆದುಕೊಂಡ ದೇವರಕಾಡುಗಳ ಸಂರಕ್ಷಣೆಯನ್ನು ಉತ್ತೇಜಿಸಿದರು. ಆರ್ಥಿಕವಾಗಿ ಕೃಷಿ, ಮಸಾಲೆ ಬೆಳೆಗಳು, ಅರಣ್ಯ ಸಂಪನ್ಮೂಲಗಳು ಹಾಗೂ ವ್ಯಾಪಾರ ಸಂಬಂಧಗಳಿಗೆ ಅನುಕೂಲಕರ ವಾತಾವರಣ ನಿರ್ಮಿಸಿದರು. ಕಾಫಿ ಬೆಳೆಯ ವಿಸ್ತರಣೆ ಕೂಡ ಹಾಲೇರಿ ಆಡಳಿತದ ಕಾಲದಲ್ಲೇ ಆರಂಭವಾಯಿತು. ರಾಜಕೀಯವಾಗಿ ಕೆಳದಿ ನಾಯಕರು, ಮೈಸೂರು ಒಡೆಯರು, ಹೈದರ ಅಲಿ, ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಷರೊಂದಿಗೆ ಮಿತ್ರತ್ವ ಮತ್ತು ಸಂಘರ್ಷದ ಸಂಬಂಧಗಳನ್ನು ಹೊಂದಿದ್ದು, 1834ರಲ್ಲಿ ಬ್ರಿಟಿಷರ ಆಡಳಿತಕ್ಕೆ ಕೊಡಗನ್ನು ಒಪ್ಪಿಸುವ ಮೂಲಕ ಹಾಲೇರಿ ಆಡಳಿತ ಅಂತ್ಯವಾಯಿತು. ಆದರೆ ಅವರ ಆಡಳಿತ ವ್ಯವಸ್ಥೆ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆ ಇಂದು ಕೂಡ ಕೊಡಗಿನ ಗುರುತುಗಳಾಗಿ ಉಳಿದುಕೊಂಡಿವೆ. ಬ್ರಿಟಿಷ್ ಆಡಳಿತವು ಕೆಲವೊಂದು ಹಾಲೇರಿ ಆಡಳಿತಾತ್ಮಕ ವ್ಯವಸ್ಥೆಗಳನ್ನು ಮುಂದುವರಿಸಿಕೊಂಡಿದೆ. ಈ ಅಧ್ಯಯನವು ಹಾಲೇರಿ ಮನೆತನದ ಇತಿಹಾಸವನ್ನು ರಾಜಕೀಯ ಘಟನೆಗಳಷ್ಟೇ ಅಲ್ಲ, ಸಮಾಜ, ಆರ್ಥಿಕತೆ, ಧರ್ಮ ಮತ್ತು ಸಂಸ್ಕೃತಿಯನ್ನು ಸಮಗ್ರವಾಗಿ ವಿಶ್ಲೇಷಿಸಿದೆ. ಹಾಲೇರಿ ಆಡಳಿತವು ಸ್ಥಳೀಯ ಸಂಸ್ಕೃತಿ ಮತ್ತು ರಾಜಕೀಯ ವ್ಯವಸ್ಥೆಯ ಸಮತೋಲನ ಸಾಧನೆಯ ಪ್ರಕ್ರಿಯೆಯನ್ನೂ ವಿವರಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ದೀಕ್ಷಿತ್, ಜಿ.ಎಸ್. *ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ.*
- ಕರ್ನಾಟಕ ಗ್ಯಾಸೆಟಟಿಯರ್. (1992). *ಕೊಡಗು ಜಿಲ್ಲೆ.* ಕರ್ನಾಟಕ ಸರ್ಕಾರ.
- ಮುತ್ತಣ್ಣ. (2022). *ಕೊಡಗಿನ ಇತಿಹಾಸ.* ಕೊಡವ ಸಾಹಿತ್ಯ ಅಕಾಡೆಮಿ.
- ಪೂಣಚ್ಚ, ಸಿ.ಎಂ. *ಕೊಡಗು: ಇತಿಹಾಸ* ಮತ್ತು *ಸಂಸ್ಕೃತಿ.*
- ರಮೇಶ್, ಕೆ.ವಿ. *ಕರ್ನಾಟಕ ಶಾಸನ ಸಂಪುಟಗಳು (ಆಯ್ದ ಸಂಪುಟಗಳು).* ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ.

- ಸೂರ್ಯನಾಥ ಯು. ಕಾಮತ್. (2024). *ಕರ್ನಾಟಕದ ಸಂಕ್ಷಿಪ್ತ ಇತಿಹಾಸ.* ಎಂಸಿಸಿ ಪಬ್ಲಿಕೇಷನ್.
- ಶೇಖ್ ಅಲಿ, ಬಿ. (2018). *ಕರ್ನಾಟಕದ ಇತಿಹಾಸ.* ಮೈಸೂರು ಬುಕ್ ಹೌಸ್.
- ಶೆಟ್ಟರ್, ಎಸ್. *ಕರ್ನಾಟಕದ ಇತಿಹಾಸ: ಅಧ್ಯಯನ ಮತ್ತು ಸಂಶೋಧನೆ.*